† ಶ್ರೀ ಆರ್. ಗೂಂಡೂರಾವ್.—ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಬಲ್ಲೂಂಟ ಗಣಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಪೋಲೀಸ್ ಹಾಗೂ ಆಡಳಿತ ವರ್ಗ ಒಂದಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೇನೆ. ಮತ್ತು ಸಬ್ ಇನ್ಸ್‌ಪೆಕ್ಟರ್ ಬಹಳ ತೊಂದರೆ ಮಾಡುತ್ತಾ ಇದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದರು. ಸಬ್ ಇನ್ಸ್‌ಪೆಕ್ಟರ್ ಏನಾದರೂ ಆ ರೀತಿ ಸಂಬಂಧಪಟ್ಟ ವಿಷಯದಲ್ಲಿ ಕೈಹಾಕಿದ್ದರೆ, ಅದನ್ನು ಪ್ರತ್ಯೇಕವಾಗಿ ಸರ್ಕಾರಕ್ಕೆ ಕಳಿಸಿಕೊಟ್ಟರೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅಳವಿಂದ್, ಮಳೆಬೆನ್ನೂರ್ ಕಾರ್ಮಿಕರನ್ನು ಸೇರಿಸಿ ಕಟ್ಟಳೆ ಹಾಕಿದರು. ಕಟ್ಟಳೆ ವಿಚಾರಣೆ ಆಗಿ ಬಳ್ಳಾರಿ ಸೆಷನ್ ಜಡ್ಜರು ತೀರ್ಪಿನಲ್ಲಿ ಹೇಳಿದ್ದಾರೆ. ಏನೆಂದರೆ, ಪೋಲೀಸ್ ಅಧಿಕಾರಿಗಳು ಸುಳ್ಳು ಕೇಸ್ ಹಾಕಿ, ಸುಳ್ಳು ಸಾಕ್ಷಿಗಳನ್ನು ಕೊಟ್ಟಿದ್ದಾರೆ, ಯಾವುದೇ ವಿಷಯ ಜ್ಞಿರುಜುವಾತಾಗಿಲ್ಲ, ಮಾಲೀಕರು ಮತ್ತು ಪೋಲೀಸರು ಶಾಮೀಲಾಗಿ ಈ ಕಟ್ಟಲೆಯನ್ನು ಹಾಕಿದ್ದಾರೆ ಎಂದು ಅವರು ರಿಮಾರ್ಕ್ಸ್ ಬರೆದಿದ್ದಾರೆ. ದಯವಿಟ್ಟು ಆ ತೀರ್ಪನ್ನು ತರಿಸಿನೋಡಿ ಪೋಲೀಸ್ ಅಧಿಕಾರಿಗಳ ಮೇಲೆ ಅಂತಹ ಅಡ್ವರ್ಸ್ ರಿಮಾರ್ಕ್ ಬರೆದಿದ್ದರೆ, ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ಆಗಬಹುದು.

ಶ್ರೀ ಪಂಪಾಪತಿ.—ಈ ಕೇಸಿನಲ್ಲಿ ೩೫ ಜನ ಕೆಲಸ ಮಾಡತಕ್ಕವರು ಸೇರಿರುವುದರಿಂದ ಅವರಿಗೆ ಕೆಲಸವಿಲ್ಲ. ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಾಡಿದ ತೊಂದರೆಯಿಂದ ೩೫ ಜನ ಕೆಲಸಗಾರರಿಗೆ ಕೆಲಸವಿಲ್ಲ. ಇದು ಸುಳ್ಳು ಕೇಸ್ ಎಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ. ಆದುದರಿಂದ ಕೆಲಸ ಗಾರರನ್ನು ಕೆಲಸಕ್ಕೆ ಕಳಿಸುವುದಕ್ಕೆ ಮಾಲೀಕರ ಮೇಲೆ ಒತ್ತಾಯ ತರುತ್ತೀರಾ ಸ್ವಾಮಿ ?

ಶ್ರೀ ಆರ್. ಗುಂಡೂರಾವ್.—ಕಾನೂನು ಪ್ರಕಾರ ನೋಡಬೇಕಾಗುತ್ತದೆ. ಮಾನ್ಯ ಕಕ್ಕಿಲ್ಲಾಯರವರು ಹೇಳಿದ ಹಾಗೆ ಜಡ್ಜ್‌ಮೆಂಡ್ ತರಿಸಿ ಪರಿಶೀಲನೆ ಮಾಡಿ ವಿಚಾರ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY
(but not taken up)

Building for Girls High School at Tiptur.

229 SRI V. L. SHIVANNA (Tiptur).—Will the Minister for Education be pleased to state :—

whether the Government Secondary Girls School in Tiptur town has its own building ?

SRI G. B. SHANKARA RAO (Minister for Education).—

This High School is running in its own building.

Chakra Savehaklu and Varahi Project in Thirthahalli Taluk.

601 SRI KADIDAL DIWAKAR (Thirthahalli).—Will the Chief Minister be pleased to state :—

(a) the stage, at which, Chakra, Savehaklu and Varahi irrigation works now going on in Thirthahalli area, stand at present ;